# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.67/2023

ಪಿ.ಡಬ್ಲ್ಯೂಃ4

ಸಿ.ಡಬ್ಲ್ಯೂಃ 5

ಸಾಕ್ಷಿದಾರರ ಹೆಸರು : ಲೋಕೇಶ ಆರ್ ಪಾಠನಕರ

ತಂದೆಯ ಹೆಸರು : ರಮೇಶ ಪಾಠನಕರ

ವಯಸ್ಸು : 49 ವರ್ಷ

ಉದ್ಯೋಗ : ವಲಯ ಅರಣ್ಯಾಧಿಕಾರಿ ಮಾಸ್ತಿಕಟ್ಟಾ

ವಾಸ : ಮಾಸ್ತಿಕಟ್ಟಾ

ದಿನಾಂಕಃ 21-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ರಾಮನ ಗುಳಿ ವಲಯದಲ್ಲಿ ವಲಯಅರಣ್ಯಾಧಿಕಾರಿ ಯಾಗಿ ದಿನಾಂಕಃ 29-11-2019 ರಿಂದ ದಿನಾಂಕಃ 30-03-2022 ರ ವರೆಗೆ ಕಾರ್ಯ ನಿರ್ವಹಿಸಿದ್ದೇನೆ .

2. ದಿಃ 5-1-2022 ರಂದು ಉಪ ವಲಯ ಅರಣ್ಯಾಧಿಕಾರಿ ಚಾಸಾ-1 ರವರು ಮಧ್ಯಾಹ್ನ 2-30 ರ ಸಮಾರಿಗೆ ವಲಯ ಕಚೇರಿಗೆ ಹಾಜರಾಗಿ ಒಂದು ಪಿರ್ಯಾದಿಯನ್ನು ಪಂಚನಾಮೆ ಮತ್ತು ಜಪ್ತು ವರದಿಯನ್ನು ಸಲ್ಲಿಸಿ ಕಮ್ಮಾಣಿ ಗ್ರಾಮದ ಅರಣ್ಯ ಸರ್ವೆನಂ 16 ಮದ್ದನಮನೆ ನಾಲಾದಲ್ಲಿ ಅರೋಪಿತರಾದ 1 ರಿಂದ 4 ಆರೋಪಿತರು ಇವರುಗಳು ಒಂದು ಕಾಡು ಹಂದಿ ಬೇಟೆಯಾಡಿ ಮಾಂಸವನ್ನು ತಿನ್ನು ವ ಉದ್ದೇಶದಿಂದ ಮಾಂಸವನ್ನು ತಯಾರಿಸುವ ತಜಿವಿಜಿಯಲ್ಲಿ ಇದ್ದಾಗ ನಾವುಗಳು ಅವರನ್ನು ಅಟಕಾಯಿಸಿ ಹಿಡಿದು ಅದರಲ್ಲಿ 3 ಮತ್ತು 4 ಅರೋಪಿ ನಮ್ಮನ್ನು ನೋಡಿ ಓಡಿ ಪರಾರಿಯಾಗಿರುತ್ತಾರೆ ಮತ್ತು ಇವರು ಸಂಜ್ಞೆಯ ಅಪರಾದ ಮಾಡಿರುವುದರಿಂದ ಅವರ ಮೇಲೆ ಕಾನೂನಿನ ಕ್ರಮ ಕೈಗೊಬೇಕಾಗಿ ಚಾಸಾ -1 ರವರು ಪಿರ್ಯಾದಿ ಸಲ್ಲಿಸಿರುತ್ತಾರೆ . ಅವರು ಸಲ್ಲಿಸಿದ ಜಪ್ತು ವರದಿಯಲ್ಲಿ ಕಾಡು ಹಂದಿ ಯನ್ನು

ಬೇಟೆಯಾಡಲು ಬಳಸಿದ 10 ಮೀಟರ ಉದ್ದದ ಕಬ್ಬಿಣದ ತಂತಿಯನ್ನು ಜಪ್ತು ಮಾಡಿ ನನ್ನ ಮುಂದೆ ಹಾಜರ ಪಡಿಸಿರುತ್ತಾರೆ . ಸದ್ರಿ ಪ್ರಕರಣವು ಕಾಡುಹಂದಿಯ ಪ್ರಕರಣವಾಗಿದ್ದರಿಂದ ಪಶು ವೈದ್ಯಾಧಿಕಾರಿ ಡಾಃ ಚಂದನ ರವರಿಗೆ ಪತ್ರ ಬರೆದು ಮರಣೋತ್ತರ ಪರೀಕ್ಷೆ ನಡೆಸಬೇಕಾಗಿ ಕೋರಿಕೊಂಡು ಪತ್ರವನ್ನು ರವಾನಿಸಿರುತ್ತೇನೆ .ಸದ್ರಿ ಪತ್ರ ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15 (ಎ) ಎಂದು ಗುರುತಿಸಲಾಯಿತು . ಅಷ್ಟರಲ್ಲಿ ನಾನು 1 ನೆ ಅರೋಪಿ ಇವರನ್ನು ಈ ಪ್ರಕಣದ ಕುರಿತು ವಿಚಾರಿಸಿರುತ್ತೇನೆ . ಅವರು ತಮ್ಮ ತೋಟಕ್ಕೆ ಒಂದು ಕಾಡು ಹಂದಿ ಬೆಳೆ ಹಾನಿ ಮಾಡುತ್ತಿದ್ದ ಕಾರಣ ಅದನ್ನು ತಡೆಯುವ ಉದ್ದೇಶದಿಂದ ಅವರ ತೋಟಕ್ಕೆ ಅಳವಡಿಸಿದ ಆಯಬೆಕ್ಸ ಬೇಲಿಗೆ ಹತ್ತಿರದಲ್ಲಿ ಹಾದು ಹೋದ ವಿದ್ಯುತ ಲೈನ ಮೂಲಕ ರಾತ್ರಿ ವೇಳೆ ವಿದ್ಯುತ ಹರಿಸಿದ್ದು ಇರುತ್ತದೆ . ಮುಂಜಾನೆ ಎದ್ದು ನೋಡಿದಾಗ ಸದ್ರಿ ತಂತಿಗೆ ಒಂದು ಕಾಡು ಹಂದಿ ಸತ್ತು ಬಿದ್ದಿರುವುದು ಗಮನಿಸಿ ಅದನ್ನು ತಿನ್ನುವ ಉದ್ದೇಶದಿಂದ ತನ್ನ ಮಗನಾದ 2 ನೆ ಅರೋಪಿಯನ್ನು ಜೊತೆ ಗೂಡಿಸಿಕೊಂಡು ಮತ್ತು 3 ಮತ್ತು 4 ನೆ ಅರೋಪಿರನ್ನು ಕರೆ ಮಾಡಿ ಕರೆಯಿಸಿ ಹಂದಿಯ ಕಳೆ ಬರಹ ಹೊತ್ತು ಮನೆಯ ಹತ್ತಿರ ಇದ್ದ ಮದ್ದನಮನೆ ನಾಲಾದಲ್ಲಿ ಸುಟ್ಟ ತೊಳೆಯತ್ತಿರುವಾಗ ಅರಣ್ಯ ಸಿಬ್ಬಂದಿಗಳು ಬಂದು ಅಟಕಾಯಿಸಿ ಹಿಡಿದಿರುತ್ತಾರೆ ಮತ್ತ ಅಷ್ಟರಲ್ಲಿ 3 ಮತ್ತು 4 ಅರೋಪಿತರು ಅರಣ್ಯದಲ್ಲಿ ಓಡಿ ಪರಾರಿಯಾಗಿರುತ್ತಾರೆ ಎಂದು ತಿಳಿಸಿರುತ್ತಾರೆ . ಇದೇ ರೀತಿಯಾದ ಹೇಳಿಕೆಯನ್ನು 2 ಜನ ಅರೋಪಿ ತರು ನನ್ನ ಮುಂದೆ ನೀಡಿರುತ್ತಾರೆ .

3. ಅದೇ ದಿನ ಸುಮಾರು 4-30 ರ ಗಂಟೆಗೆ ಪಶು ವೈದ್ಯಾಧಿಕಾರಿಗಳು ಕಚೇರಿಗೆ ಬಂದಂತೆ ಅವರುಗಳ ಜೊತೆ 1 ಮತ್ತು 2 ನೆ ಆರೋತಪಿರ ಜೊತೆ ಹಾಗೂ ಪಂಚರೊಂದಿಗೆ ಗುನ್ನೆ ನಡೆದ ಸ್ಥಳಕ್ಕೆ ಹೋಗಿ ಪಶುವೈದ್ಯಾಧಿಕಾರಿಗಳು ಸತ್ತ ಹಂದಿಯ ಕಳೆಬರಹ ದ ಮರಣೋತ್ತರ ಪರೀಕ್ಷೆ ನಡೆಸಿರುತ್ತಾರೆ ಆ ಸಂದರ್ಭದಲ್ಲಿ ಚಾಯಾ ಚಿತ್ರ ತೆಯಲಾಗಿರುತ್ತದೆ . ಸದ್ರಿ ಛಾಯ ಚಿತ್ರವನ್ನು ಸಾಕ್ಷಿಗೆ ತೋರಿಸಲಾಗಿದ್ದು ಅವುಗಳು ಈಗಾಗಲೆ ನಿಪಿ-2 ರಿಂದ 7 ಎಂದು ನಿಶಾನೆಗೆ ಒಳಪಟ್ಟಿರುತ್ತದೆ . ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ,

4. ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಿಧಿ ವಿಜ್ಞಾನ ಸಂಸ್ಥೆ ಯಿಂದ ಇದು ಕಾಡು ಹಂದಿ ಯೇ ಎಂಬ ಬಗ್ಗೆ ಮಾಹಿತಿ ಪಡೆಯುವ ಉದ್ದೇಶದಿಂದ ಹಂದಿಯ ತೊಡೆ ಭಾಗದ ಮಾಂಸವನ್ನು ಪಶು ವೈದ್ಯಾಧಿಕಾರಿಯಿಂದ

ತೆಗೆಸಿ ಉಪ್ಪಿನಲ್ಲಿ ಸಂಗ್ರಹಿಸಿ ಪಡೆದದ್ದು ಇರುತ್ತದೆ . ತದನಂತರ ನಾವು ವಲಯ ಕಚೆರೀಗೆ ಬಂದು ಆರೋಪಿ 1 ಮ್ತು 2 ಇವರಿಗೆ ಇದು ಸಂಜ್ಞೆಯ ಅಪರಾಧವಾಗಿದ್ದರಿಂದ ನಿಮ್ಮನ್ನು ಬಂಧಿಸುತ್ತೇವೆ ಎಂದು ತಿಳಿಸಿ ಆರೋಪಿ 1 ಇವರ ತಮ್ಮನ ಮಗನಾದ ಯೋಗೇಶ ಈಶ್ವರ ಸಿದ್ದಿ ಇವರನ್ನು ಕರೆಯಿಸಿ ಬಂಧನ ತಿಳುವಳಿಕೆ ಪತ್ರ ನೀಡಿದ್ದು ಇರುತ್ತದೆ . ಸ್ದ್ರಿ ಬಂಧನ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿದ್ದು ಆ ಬಂಧನ ಪತ್ರ ವು ಯಥಾ ನಕಲು ಅಗಿದ್ದು ಸ್ದ್ರಿ ದಾಖಲಾತಿಯನ್ನು ನಿಪಿ-16 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ಯನ್ನು ನಿಪಿ-16 (ಎ) ಎಂದು ಗುರುತಿಸಲಾಯಿತು. .ಅಂದು ಕತ್ತಲಾದ ಕಾರಣ ಅರೋಪಿ 1 ಮತ್ತು 2 ರವನ್ನು ನಮ್ಮ ಸುಪರ್ದಿಗೆ ಇಟ್ಟುಕೊಂಡು ದಿಃ6-12022 ರಂದು ಇಲಾಖಾ ಸಿಬ್ಬಂದಿಗಳೊಂದಿಗೆ ಅವನ್ನು ಕಳುಹಿಸಿ ಅವರ ವೈಧ್ಯಕೀಯ ತಪಾಸಣೆ ಮಾಡಿಸಿ ಸೂಕ್ತ ಬೆಂಗಾವಲಿ ನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ . ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೆ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . 1 ಮತ್ತು 2 ನೇ ಆರೊಪಿಗೆ ನ್ಯಾಯಾಂಗ ಬಂಧನವಾದ ನಂತರ ಹಂದಿಯ ಕಳೆಬರಹ ವಿಲೆ ವಾರಿ ಕುರಿತು ಅನು ಮತಿ ಯನ್ನು ನ್ಯಾಯಾಲಯದಿಂದ ಪಡೆದಿರುತ್ತೇನೆ . ನ್ಯಾಯಾಲಯದಿಂದ ಪಡೆದ ಅನುಮತಿ ಪತ್ರ ಸಾಕ್ಷಿ ಗೆ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ನಿಪಿ-17 ಸಾಕ್ಷಿ ಸಹಿಯನ್ನು ನಿಪಿ-17 (ಎ) ಎಂದು ಗುರುತಿಸಲಾಯಿತು . ನಂತರ ದಿಃ7-1-2022 ರಂದು ಸಹಾಯಕ ಅರಣ್ಯಸಂರಕ್ಷಣಾಧಿಕಾರಿ ಅಂಕೊಲಾ ಉಪ ವಿಭಾಗ ಚಾಸಾ -6 ರೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ನ್ಯಾಯಾಲಯದಿಂದ ಅದೇಶ ಪಡೆದಂತೆ ಹಂದಿಯ ಕಳೆಬರಹವನ್ನು ಪಂಚರ ಸಮಕ್ಷಮ ಸಂಪೂರ್ಣವಾಗಿ ಸುಟ್ಟಿದಹನ ಮಾಡಲಾಯಿತು . ಈ ವೇಳೆ ಛಾಯಾ ಚಿತ್ರ ತೆಗೆಯಲಾಯಿತು . ಸಾಕ್ಷಿಗೆ ಈಗಾಗಲೆ ಗುರುತಿಸಲಾಗಿರುವ ನಿಪಿ-1 ನ್ನು ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸಹಿಯನ್ನು ನಿಪಿ-11 (ಸಿ) ಎಂದು ಗುರುತಿಸಲಾಯಿತು . ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿರುವ ನಿಪಿ-12 ರಿಂದ 14 ಪೋಟೊ ತೋರಿಸಲಾಗಿದ್ದು ಸಾಕ್ಷಿ ಆ ಪೊಟೊ ನೋಡಿ ಗುರುತಿಸಿರುತ್ತಾರೆ .

5. ದಿಃ10-1-2022 ರಂದು 1 ರಿಂದ 4 ನೇ ಆರೋಪಿತರು ಅವರಿಗೆ ಜಾಮೀನು ನೀಡದಂತೆ ಮಾನ್ಯ ನ್ಯಾಯಾಲಯಕ್ಕೆ ತಕರಾರು ಅರ್ಜಿ ಸಲ್ಲಿಸಿರುತ್ತೇನೆ . ಅದೇ ದಿನ ಸಂಜೆ 4 ಜನ ಆರೋಪಿತರು ಜಾಮಿನು

ಪತ್ರ ದೊಂದಿಗೆ ವಲಯ  ಕಚೇರಿಗೆ ಬಂದು ಹಾಜರರಾಗಿರುತ್ತಾರೆ .  ನ್ಯಾಯಾಲಯದ ಮುಂದೆ 3 ಮತ್ತು 4 ನೆ ಆರೋತಪಿರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .

6. ದಿಃ17-1-2022 ರಂದು  ಹಂದಿಯ ಕಳೆಬರಹದಿಂದ ಸಂಗ್ರಹಿಸಿದ ಮಾಂಸದ ತುಂಡನ್ನು ವಿಧಿ ವಿಜ್ಞಾನ ಸಂಸ್ಥೆ ಹೈದರಾಬಾದ ರವರಿಗೆ ಪರಿಕ್ಷಾ ವರದಿ  ಕಳುಹಿಸಿ ಕೊಂಡುವಂತೆ ಕೋರಿಕೆ ಪತ್ರ ಕಳುಹಿಸಿ ಕೊಟ್ಟಿರುತ್ತೇನೆ ಮತ್ತು ಸ್ಯಾಂಪಲ್  ವನ್ನು ಪೋಸ್ಟ ಮುಖಾಂತರ ರವಾನಿಸಿರುತ್ತೇನೆ  .

7. ತದ ನಂತರ ಪರಿಕ್ಷಾ ವರದಿ ಬೆಗನೆ ಪ್ರಾಪ್ತ ವಾಗದ ಕಾರಣ ಮುಂದಿನ ತನಿಖೆಗಾಗಿ ಪ್ರಕರಣವನ್ನು  ದಿಃ4-3-2022 ರಂದು  ಚಾಸಾ -6 ರವರಿಗೆ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಹಸ್ತಾಂತರಿಸಿರುತ್ತೇನೆ .  ನನ್ನ ಮುಂದೆ ಹಾಜರ ಪಡಿಸಿದ ಈಗಾಗಲೇ ಗುರುತಿಸಲಾಗಿದ್ದ ಮು.ಮಾ 1 ನ್ನು  ನಾನು ನೋಡಿ ಗುರುತಿಸಿರುತ್ತೇನೆ  .

**ಪಾಟೀ ಸವಾಲುಃ**   ಆರೋಪಿ ಪರ ಶ್ರೀ  ಆರ್ ಎನ್ ಎಚ್    ವಕೀಲರಿಂದಃ

8. ನನಗೆ ವನ್ಯ ಜೀವಿಸಂರಕ್ಷಣಾ  ಕಾನೂನಿನ ಅಡಿಯಲ್ಲಿ ಯಾವ ರೀತಿ ಪ್ರಕರಣ ದಾಖಲಿಸಬೇಕು ಎಂಬ ಬಗೆಗ ಮಾಹಿತಿ ಇರುತ್ತದೆ .  ಚಾಸಾ -1 ರವರು ನೀಡಿದ  ದೂರಿನ ಪ್ರಕಾರ ಈ ಪ್ರಕರಣಲ್ಲಿ FIR ಮಾಡಲು ಬರುವುದಿಲ್ಲ ಎಂದು ನೀವು ಮಾಹಿತಿ ಕೊಟ್ಟಿರುತ್ತೀರಾ ಎಂದರೆ    ವನ್ಯ ಜೀವಿ ಸಂರಕ್ಷಣಾ ಕಾಯ್ದೆ  ಅಡಿಯಲ್ಲಿ FIR ರಜಿಷ್ಟರ ಮಾಡಲು ಬರುವುದಿಲ್ಲ.  ಆ ಕಾರಣದಿಂದ ದೂರನ್ನು ಕೊಟ್ಟಿರುತ್ತಾರೆ. ಇಂತಹ ಪ್ರಕರಣವನ್ನು ದಾಖಲಿಸಬೇಕು ಎಂದು ನೀವು ಮಾನ್ಯ ನ್ಯಾಯಾಲಯಕ್ಕೆ ಸದ್ರಿ ಪಿರ್ಯಾದೆಯನ್ನು ಹಾಜರ ಪಡಿಸಿ ಪ್ರಕರಣ ದಾಖಲಿಸಲು ಅನುಮತಿ ಕೊಡಬೆಕು ಎಂದು ಕೋರಿ ಕೊಂಡಿರುತ್ತೀರಾ ಎಂದರೆ ಇದು ಸಂಜ್ಞೆಯ ಅಪರಾಧ ವಾಗಿದ್ದರಿಂದ ಆ ರೀತಿ ಅನುಮತಿ ಪಡೆದುಕೊಳ್ಳಬೆಕು ಎಂದು ಇರುವುದಿಲ್ಲ .

9. ನೀವು ಕಲಂ 55 ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಓದಿರುತ್ತಿರೊ  ಅಥವಾ ಇಲ್ಲವೊ ಎಂದರೆ ನಾನು ಓದಿರುತ್ತೇನೆ .  ಕಲಂ 55 ವನ್ಯ ಜಿಲವಿ ಸಂರಕ್ಷಣಾ ಕಾಯ್ದೆ  ಅಡಿಯಲ್ಲಿ ರಾಜ್ಯ ಸರಕಾರದ ಅದೇಶದ ಪ್ರಕಾರ conservative forester  ಕಲಂ 200 Cr.P.C  ಖಾಸಗಿ ಪಿರ್ಯಾದೆಯನ್ನು ಸಲ್ಲಿಸಬೇಕು ಎಂದು ಕಾನುನುಇ ದೆ ಎಂದರೆ  ವನ್ಯ ಜೀವಿ ಸಂರಕ್ಷಣಾ ಕಾಯ್ದು ಅಡಿಯಿಲ್ಲಿ ಉಪ ವಲಯ ಅರಣ್ಯಾಧಿಕಾರಿ ಹಾಗೂ

ಮೇಲ್ಪಟ್ಟ ಅಧಿಕಾರಿಗಳು ಪಿರ್ಯಾದಿಯನ್ನು ಸಲ್ಲಿಸಬಹುದು ಎಂದು ಸರ್ಕಾರದ ಆದೇಶ ಇರುತ್ತದೆ ನೀವು ಅದನ್ನು ಸುಳ್ಳಾಗಿ ಹೇಳುತಿದ್ದೀರಿ RFO ಗಿಂತ ಕಡಿಮೆ ದರ್ಜೆಯ ನೌಕರರು ಪಿರ್ಯಾದೆಯನ್ನು ಸಲ್ಲಿಸುವ ಹಾಗೆ ಇಲ್ಲ ಎಂದರೆ ಸರಿಯಲ್ಲ . ವನ್ಯ ಜೀವಿ ಸರಂಕ್ಷಣಾ ಕಾಯ್ದೆ ಅಡಿಯಲ್ಲಿ ಯಾವುದೇ ತನಿಖೆಯನ್ನು ACF ರವರು ಮಾಡಬೇಕು ಎಂದರೆ ಪ್ರಾಥಮಿಕ ತನಿಖೆಯನ್ನು ವಲಯ ಅರಣ್ಯಾಧಿಕಾರಿಗಳು ಮಾಡಬೆಕು ಅಂತಿಮ ವರದಿಯನ್ನು ACF ರವರೆ ಮಾಡಬೆಕು ಮತ್ತು ಈ ಪ್ರಕರಣದಲ್ಲಿ ACF ರವರು ಅಂತಿಮ ವರದಿ ಸಲ್ಲಿಸಿರುತ್ತಾರೆ . ಅಂತಿಮ ವರದಿಯನ್ನು ಸಲ್ಲಿಸುವ ಸಮಯದಲ್ಲಿ ಪ್ರತಿಯೊಂದು ತನಿಖೆಯನ್ನು ACF ರವರು ಸಂಪೂರ್ಣವಾಗಿ ಮಾಡಬೇಕಾಗುತ್ತದೆ ಎಂದರೆ ಹಾಗೆನಿಲ್ಲ ಪ್ರಾಥಮಿಕ ತನಿಖೆಯಲ್ಲಿ ನಾವು ಕೂಡ ಆರೋತಪಿರ ಹೇಳಿಕೆ ಪಡೆಯಬಹುದು . ಆರೊಪಿತರ ಹೇಳಿಕೆಯನ್ನು ಪಡೆಯುವುದು ನಿಮ್ಮ ಪ್ರಕಾರ ಪ್ರಾಥಮಿಕ ತನಿಖೆ ಯಾಗುತ್ತದೆಯೋ ಅಥವಾ ಅಂತಿಮ ತನಿಖೆ ಯಾಗುತ್ತದೆಯೊ ಎಂದರೆ ನಾನು ಪಡೆದ ಹೇಳಿಕೆ ಪ್ರಾಥಮಿಕ ತನಿಖೆ ಯಾಗಿರುತ್ತದೆ . ಚಾಸಾ –1 ರವರು ಪಿರ್ಯಾದೆ ಜಪ್ತು ಪಂಚನಾಮೆ ಹಾಗೂ ತಂತಿಯನ್ನು ಹಾಜರ ಪಡಿಸಿದಾಗ ಈ ವಿಷಯವನ್ನು ನಿಮ್ಮ ಮೇಲಾಧಿಕಾರಿಯಾದ ACF ರವರಿಗೆ ದಾಖಲಾತಿ ಮೂಲಕ ಪ್ರಕರಣದ ಬಗ್ಗೆ ಮಾಹಿತಿ ತಿಳಿಸಿರುತ್ತೀರಾ ಎಂದರೆ ನಾನು ಪೋನ ಮುಖಾಂತರ ಮಾಹಿತಿ ತಿಳಿಸಿರುತ್ತೇನೆ 10. ನಮ್ಮ ಇಲಾಖೆಯಲ್ಲಿ ಆ ಸಮಯದಲ್ಲಿ ಇ–ಮೇಲ್ ವ್ಯವಸ್ಥೆ ಇರಲಿಲ್ಲ . ನಮ್ಮ ಇಲಾಖೆಯ ಕಚೆರಿಯಲ್ಲಿ ಪೋನ ಸಿಗ್ನಲ್ ಇರುತ್ತದೆ . ಮೊಬೈಲ ಅಪರೇಟ ಆಗುತ್ತದೆ ಮತ್ತು ಕಂಪ್ಯೂಟರ ಇರುತ್ತದೆ ಅದರೆ ಇಂಟರನೆಟ್ ಕನೆಕ್ಷನ ಇಲ್ಲ . ಅಲ್ಲಿ ಜಿಯೊ ಮತ್ತು ಎರಟೆಲ್ ಟವರ ಇಲ್ಲ . ಜಿಯೊ ಎರಟೆಲ ಹಾಗೂ ಬಿ ಎಸ್ ಎನ ಎಲ್ ಟವರಗಳು ರಾಮನಗುಳಿ ಗ್ರಾಮದಲ್ಲಿ ಇಲ್ಲ ಗುಲ್ಲಾಪುರ ದಲ್ಲಿ ಇರುತ್ತದೆ . ರಾಮನಗುಳಿ ಯಲ್ಲಿ ರುವ ಪ್ರಭಾಕರ ವಿಠೋಬಾ ಶೆಟ್ಟಿ ರವನ್ನು ನೋಡಿರುತ್ತಿರಾ ಎಂದರೆ ಇಲ್ಲ . ಅವರ ಮನೆಯ ಬಳಿಯಲ್ಲಿ ಜಿಯೋ ಟವರ ಇರುತ್ತದೆ ಎಂದರೆ ಈ ಘಟನೆ ನಡೆದಿರುವುದು 2022 ರಲ್ಲಿ ಆಗ ಆ ಟವರ ಅಲ್ಲಿ ಇತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ . ಅಲ್ಲಿ ಈ ಮೇಲ್ಕಂಡ ಎಲ್ಲಾ ಟವರ ಗಳ ಸಿಗ್ನಲ ಇರುತ್ತದೆ ಮತ್ತು ನೀವು ಮೇಲಾಧಿಕಾರಿಗಳಿಗೆ ಇ– ಮೇಲ್ ಮುಖಾಂತರ ಸ್ದ್ರಿ ಪ್ರಕರಣದ ಬಗ್ಗೆ ಮಾಹಿತಿ ಕಳುಹಿಸಿ ಕೊಡಬಹುದಾಗಿತ್ತು ಅದನ್ನು ನೀವು ಕಳುಹಿಸಿ ಕೊಟ್ಟಿಲ್ಲ ಆ ಕಾರಣದಿಂದ ಸ್ದ್ರಿ ಮೆಲ್ಕಂಡ ಟವರ ಗಳು ಮತ್ತು

ಇಂಟರನೆಟ್ ಕನೆಕ್ಷನ ಇಲ್ಲ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಚಾಸಾ –1 ರವರು ಸದ್ರಿ ಪ್ರಕರಣದ ಬಗ್ಗೆ ಬಿಟ್ ಗೆಹೋಗಲು ರಾಮನಗುಳಿಯ ನಮ್ಮ ಕಚೇರಿಯಿಂದ ಹೋಗಿರುತ್ತಾರೆ . ನಮ್ಮ ಕಚೇರಿಯು ಎಲ್ಲಾ ಸಿಬ್ಬಂದಿಗಳಿಗೆ ರಾಮನಗುಳಿ ಯಲ್ಲಿ ಕ್ವಾಟರ್ಸ ಇರುತ್ತದೆ ಎಂದರೆ ಸರಿ . ಸದ್ರಿ ಬಿಟ್ ಹೋಗುವ ಪೂರ್ವದಲ್ಲಿ ಸಿಬ್ಬಂದಿಗಳು ನಿಮ್ಮ ಕಚೇರಿಗೆ ಬರುತ್ತಾರೊ ಇಲ್ಲವ್ರೊ ಎಂದರೆ ಅವಶ್ಯಕತೆ ಇದ್ದರೆ ಬರುತ್ತಾರೆ ಇಲ್ಲದೆ ಇದ್ದರೆ ಬಿಟ್ ಗೆ ಹಾಗೆ ಹೋಗುತ್ತಾರೆ ಹಳವಳ್ಳಿಯಲ್ಲಿ ಒಂದು ಕ್ವಾರ್ಟಸ ಇದೆ . ಚಾಸಾ–1 ಮತ್ತು 2 ರವರು ನಾವು ಈ ರೀತಿಯಾಗಿ ಬಿಟ್ ಹೋಗಿರುತ್ತೇವೆ ಎಂದು ಮತ್ತು ಗಸ್ತಿಗೆ ಹೋಗುತ್ತೇವೆ ಎಂದು ನಿಮಗೆ ತಿಳಿಸಿ ಹೋಗಿರುತ್ತಾರೆ ಎಂದರೆ ತಿಂಗಳ ಕೊನೆಯಲ್ಲಿ ಉಪ ವಲಯಅರಣ್ಯಾಧಿಕಾರಿಗಳು ದಿನಚರಿ ಸಲ್ಲಿಸುತ್ತಾರೆ ಅರಣ್ಯರಕ್ಷಕರು ಅವರ ಸುಪರ್ದಿಗೆಯಲ್ಲಿ ಕೆಲಸ ಮಾಡುವುದರಿಂದ ಮತ್ತು ಅರಣ್ಯ ಕಾನೂನಿನಲ್ಲಿ ಅರಣ್ಯ ರಕ್ಷಕರು ದಿನಚರಿಯನ್ನು ಸಲ್ಲಿಸಲೆ ಬೇಕು ಎಂಬ ನಿಯಮ ಇಲ್ಲ . ಆ ದಿನಚರಿಯನ್ನು ದಿಃ01–01–2022 ರಿಂದ 31–01–2022 ರ ವರೆಗೆ ಅರಣ್ಯ ರಕ್ಷಕರು ನೀಡಿರುವ ದಿನಚರಿಯನ್ನು ಕಡತದೊಂದಿಗೆ ಹಾಜರ ಪಡಿಸಲು ನಿಮಗಾಗಿಲಿ ಅಥವಾ ACF ರವರಿಗಾಗಲಿ ಯಾವುದಾದರೂ ತೊಂದರೆ ಇತ್ತಾ ಎಂದರೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರ ಪಡಿಸಿಲ್ಲ ಆದರ ತಿಂಗಳ ಕೊನೆಯಲ್ಲಿ ಅರಣ್ಯ ಉಪ ವಲಯಾ ಅರಣ್ಯಾಧಿಕಾರಿಗಳ ದಿನಚರಿಯನ್ನು ACF ರವರಿಗೆ ಕಳುಹಿಸಿ ಕೊಟ್ಟಿರುತ್ತೇನೆ . ಚಾಸಾ –2 ಮತ್ತು 3 ರವರು ನಮ್ಮ ಕಚೆರಿಯಲ್ಲಿ ದಿನ ಗೂಲಿ ಅಧಾರದಲ್ಲಿ ವ್ಯಾಚಮಾನ ಕೆಲಸ ಮಾಡುತ್ತಾರೆ ಎಂದರೆ ಇಲ್ಲ . ಚಾಸಾ –2 ಮತ್ತು 3 ರವರು ನಮ್ಮ ಕಚೇರಿಯಲ್ಲಿ ದಿನಗೂಲಿ ಅಥವಾ ವ್ಯಾಚಮನ ಕೆಲಸಕ್ಕೆ ಬರುವುದಿಲ್ಲ ಹಾಗೂ ನಮ್ಮ ಕಚೆರಿಯ ಯಾವುದೇ ರೀತಿಯ ಕೆಲಸಕ್ಕೂ ಅವರು ಬರುವುದಿಲ್ಲ .ಚಾಸಾ–2 ರವರ ಮನೆ ನಮ್ಮ ಕಚೇರಿಯಂದ ಅರ್ಧ ಕಿ ಮೀ ದೂರದಲ್ಲಿ ಇದೆ ಎಂದರೆ ಸರಿ . ಚಾಸಾ –3 ರವ ರಮನೆ ರಾಮನಗುಳಿ ಬಿಟ್ ದಿಂದ 3 ಕಿಮೀ ದೂರದಲ್ಲಿ ಇರುತ್ತದೆ ಎಂದರೆ ಇರಬಹುದು . ಚಾಸಾ –1 ರವರು ಚಾಸಾ –2 ಮ್ತು 3 ರವರನ್ನು ಎಲ್ಲಿಂದ ಕರೆದುಕೊಂಡುಹೋಗಿರುತ್ತಾರೆ ಎಂದು ನಿಮಗೆ ತಿಳಿಸಿರುತ್ತಾರಾ ಎಂದರೆ ಚಾಸಾ –2 ಮತ್ತು 3 ರವರು ಗ್ರಾಮ ಅರಣ್ಯ ಸಮಿತಿಯ ಸದಸ್ಯರಾಗಿರುತ್ತಾರೆ ಗ್ರಾಮ ಅರಣ್ಯ ಸಮಿತಿಯ ಸಧ್ಯಸರು ಅರಣ್ಯ ಇಲಾಖೆಯೊಂದಿಗೆ ಅರಣ್ಯ ಸಂರಕ್ಷಕಯೊಂದಿಗೆ ಕೈ ಜೋಡಿಸಬೇಕು ಎಂಬ

ಒಡಂಬಡಿಕೆ ಪತ್ರ ಇರುವುದರಿಂದ ಅವರನ್ನು ಅವರು ಕರದು ಕೊಂಡು ಹೋಗಿರಬಹುದು . ನಾನು ಇದನ್ನು ಸುಳ್ಳಾಗಿ ಹೇಳುತ್ತಿದ್ದೇನೆ ಅವರು ಅರಣ್ಯ ಸಮಿತಿಯ ಸದಸ್ಯರಲ್ಲ ಅವರು ನಿಮ್ಮ ಕಚೇರಿ ಯ ದಿನಗೂಲಿ ನೌಕರು ಎಂದರೆ ಸರಿಯಿಲ್ಲ .ಹಳವಳ್ಳಿಯಲ್ಲಿ ಪಶುವೈದ್ಯಾದಿಕಾರಿ ಗಳ ಆಸ್ಪತ್ರೆ ಇಲ್ಲ . ಹಳವಳ್ಳಿ ಶಾಲೆಯ ಹತ್ತಿರ ಪಶುವೈದ್ಯರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಪಶು ವೈಧ್ಯಾಧಿಕಾರಿಯಾದ ಡಾಃ ಚಂದನ ರವರ ಹೇಳಿಕೆ ಪಡೆದುಕೊಂಡಿರುತ್ತಿರಾ ಎಂದರೆ ಅದು ನನ್ನ ತನಿಖೆಯ ವ್ಯಾಪ್ತಿಗೆ ಬರುವುದಿಲ್ಲ .

11. ಆರೋಪಿತರ ಹೇಳಿಕೆ ಪಡೆದು ಕೊಂಡಿರುತ್ತೇನೆ ಎಂದರೆ ನೀವು ಹೇಳಿದಂತೆ ಅವರ ಹೇಳಿಕೆ ಪಡೆದು ಕೊಂಡ ನಂತರ ಆ ತೋಟಕ್ಕೆ ನೀವು ಹೋಗಿರುತ್ತಿರಾ ಎಂದರೆ ಹೌದು . ಆ ಹಂದಿಯ ಕಳೆಬರಹದ ಮರಣೊತ್ತರ ಪರೀಕ್ಷ ನಡೆಸುವಾಗ ಆ ಸ್ಥಳಕ್ಕೆ ಹೋಗುವಾಗ ಆರೊಪಿತರ ತೋಟದ ಮುಖಾಂತರವೆ ಹೋಗಬೇಕಾಗುತ್ತದೆ . ಆ ಸಮಯದಲ್ಲಿ ಆ ತೋಟವು ಯಾರಿಗೆ ಸಂಬಂಧಿಸಿದ್ದು ಅದರಲ್ಲಿ ಮನೆ ಇರುತ್ತದೆಯೋ ಇಲ್ಲವೊ ಅಥವಾ ಆ ಮನೆ ಯಾರಿಗೆ ಸೇರಿದ್ದು ಎಂದು ವಿಚಾರಣೆ ಮಾಡಿದ್ದೀರಾ ಎಂದರೆ ನಾನು ವಿಚಾರಣೆ ಮಾಡಿರುತ್ತೇನೆ . ಅದು forest rights act ಅಡಿಯಲ್ಲಿ ಪಟ್ಟಾ ನೀಡಿದ ಸ್ಥಳವಾಗಿದ್ದು ಅದು 1 ನೆ ಅರೋಪಿಯ ತಾಯಿ ಹೆಸರಿನಲ್ಲಿ ಪಟ್ಟಾ ನೀಡಿದ ಸ್ಥಳವಾಗಿರುತ್ತದೆ . 1 ನೇ ಆರೊೋಪಿಯ ತಾಯಿಗೆ ನಿಮ್ಮ ಪಟ್ಟಾ ಸ್ಥಳದಲ್ಲಿ ನೀವು ಹೇಳುವಂತೆ ಕಾಡುಹಂದಿ ಸತ್ತು ಬಿದ್ದೀದೆ ಹಾಗಾಗಿ ನೋಟಿಸನ್ನು ನೀಡಿ ಆ ಮನೆ ನಂಬರ ಏನು ಎಂದು ಕಲೆ ಹಾಕುವ ಪ್ರಯತ್ನ ಮಾಡಿರುತ್ತಿರಾ ಎಂದರೆ ಅದು ನನ್ನ ವ್ಯಾಪ್ತಿಗೆ ಬರುವುದಿಲ್ಲ ನಾನು ಪ್ರಾಥಮಿಕ ತನಿಖೆ ಮಾತ್ರ ಮಾಡಿರುತ್ತೇನೆ . ನ್ಯಾಯಾಲಯದ ಮುಂದೆ ಇರುವ ಮು.ಮಾ -1 ನ್ನು ನೇರವಾಗಿ ಕರಂಟ ಲೈನ ದಿಂದ ಕರೆಂಟ ಕಂಬಕ್ಕೆ ಅಳವಡಿಸಲು ಆಗುವುದಿಲ್ಲ ಎಂದರೆ ಅದನ್ನು ಅಳವಡಿಸಬಹುದು . ನನ್ನ ಪ್ರಕಾರ ಅದು 10 ಮೀಟರ ಉದ್ದ ಇರುತ್ತದೆ . ಕರೆಂಟಿನ ಕಂಬ 35 ಅಡಿಗಳಷ್ಟು ಉದ್ದ ಇರುತ್ತದೆ ಎಂದರೆ ಅದು ಸ್ಥಳದ ಮೇಲೆ ಅವಲಂಬಿತವಾಗಿರುತ್ತದೆ . ನಾನು ಆ ಕಂಬ ನೋಡಿರುತ್ತೇನೆ ಅದು ನನ್ನ ಪ್ರಕಾರ ನೆಲದಿಂದ 5 ಮೀಟರ ಇರಬಹುದು . ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಬೇಲಿಗೆ ಐಬೆಕ್ಸ ಹಾಕುವ ತಂತಿ ಎಂದರೆ ಸರಿ . ಈ ತಂತಿಯನ್ನು ಬೆಲಿಗೆ ಹಾಕಬೇಕಾದರೆ ಇನ್ಸೂಲೇಟರ ಬೇಕಾಗುತ್ತದೆ ಇದು ನನ್ನ ಪ್ರಕಾರ ಮುಮಾ1 ವನ್ನು ವಿಧ್ಯುತ ಕಂಬದ ಲೈನ

ಗೆ ಹಾಕಿ ಈ ತಂತಿಯನ್ನು ಐಬೆಕ್ಸ ಗೆ ಅಳವಡಿಸಿ ವಿದ್ಯುತ ಅಳವಡಿಸಿರುತ್ತಾರೆ . ಈ ರೀತಿಯಾಗಿ ತಂತಿಯನ್ನು ಅಳವಡಿಸಬೇಕಾದರೆ ಮೇಲುಗಡೆ ಹಾಗೂ ಕೆಳಗಡೆ 2 ತಂತಿಗಳು ಬೇಕಾಗುತ್ತದೆ ಎಂದರೆ ಹಾಗೆನಿಲ್ಲ earthing ಅಗುವುದರಿಂದ ಒಂದೇ ವೈಯರ ಸಾಕಾಗುತ್ತದೆ . ಈ ತಂತಿಯನ್ನು ಮೇಲುಗಡೆ ಕೊಕ್ಕೆ ಮುಖಾಂತರ ವಿದ್ಯುತ ಲೈನ ಗೆ ಅಳವಡಿಸಿದರೆ ಪ್ಯೂಜ್ ಡ್ಯೂವೆಲ್ ಹಾಗೂ ಇನ್ಸೂಲೇಟರ burn ಅಗಿ ಹಾರಿ ಹೋಗುತ್ತದೆ ಎಂದರೆ ನನಗೆ ವಿದ್ಯುತ ಸಂರ್ಪಕ ದ ಬಗ್ಗೆ ನನಗೆ ಮಾಹಿತಿ ಇಲ್ಲ ಹಾಗಾಗಿ ಇದರ ಬಗ್ಗೆ ನನಗೆ ಹೇಳಲಾಗುವುದಿಲ್ಲ . ನಿಮಗೆ ಈ ಪ್ರಕರಣದ ಬಗ್ಗೆ ಪ್ರಥಮ ಮಾಹಿತಿ ಬಂದಾಗ ವಿದ್ಯೂತ್ ಇಲಾಖೆಗೆ ಸಂರ್ಪಕಿಸಿ ಬೆಳ್ಳಿಗೆ 4 ರಿಂದ 5 ಗಂಟೆ ಸಮಯದಲ್ಲಿ ವಿದ್ಯುತ್ ಇತ್ತೊ ಇಲ್ಲವೊ ಎಂದು ತಿಳಿದುಕೊಂಡಿರುತ್ತಿರೊ ಇಲ್ಲವೊ ಎಂದರೆ ಪ್ರಾಥಮಿಕ ತನಿಖೆಯಲ್ಲಿ ಅರೊಪಿಗಳ ಹೇಳಿಕೆಯನ್ನು ಪಡೆಯುವುದನ್ನು ಹೊರತು ಪಡಿಸಿ ಬೇರೆಯಾರದ್ದೊ ಹೇಳಿಕೆ ಪಡೆಯುವ ಅಗತ್ಯತೆ ನನ್ನ ವ್ಯಾಪ್ತಿಗೆ ಬರುವುದಿಲ್ಲ . ಸದಿರ ನ್ಯಾಯಾಲಯದ ಮುಂದೆ ಇರುವ ಮುಮಾ –1 ನಮ್ಮ ಇಲಾಖೆಯಲ್ಲಿ ಯಾವಾಗ ಬೇಕಾದರೂ ಸಿಗುತ್ತದೆ ಎಂದರೆ ಸರಿಯಲ್ಲ . ಷದ್ರಿ ಮಮಾ–1 ಕಬ್ಬಿಣದ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸಿಗಬಹುದು ಆ ಕಾರಣದಿಂದ ಆರೋಪಿತರು ಷದ್ರಿ ಮುಮಾ–1 ವನ್ನು ಖರಿದಿ ಮಾಡಿರುತ್ತಾರೆ . ಈ ಪರಕಣದಲ್ಲಿ ಚಾಸಾ –1 ರವರು ದೂರನ್ನು ಕೊಟ್ಟಿರುವುದರಿಂದ ಅವರಿಗೆ ಅನೂಕಲೂವಾಗಲಿ ಎಂಬ ಕಾರಣದಿಂದ ಮು.ಮಾ–1 ನ್ನು ನೀವು ಮತ್ತು ಚಾಸಾ –1 ರವರು ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ನೀವು FSL ಗೇ ಹಂದಿಯ ತೊಡೆಯ ಮಾಂಸ ಮಾತ್ರ ಕಳುಹಿಸಿರುತ್ತಿರಿ ಎಂದು ಹೇಳಿರುತ್ತಿರಿ ಅದನ್ನು ಹೊರತು ಪಡಿಸಿ ಹಂದಿಯ ತಲೆ ಅಥವಾ ಇತರ ಭಾಗದ ಮಾಂಸವನ್ನು FSL ಗೆ ಕಳುಹಿಸಲು ತೊಂದರೆ ಇತ್ತಾ ಎಂದರೆ ಮಾಂಸದಿಂದಲೇ ಕಾಡು ಹಂದಿಯ ಮಾಂಸ ಎಂದು ದೃಢಪಡಿಸಬಹುದಾಗಿದ್ದರಿಂದ ಆ ಹಂದಿಯ ಇತರೆ ಭಾಗಗಳನ್ನು ತೆಗೆದು FSL ಕಳುಹಿಸಿಕೊಡಬೇಕು ಎಂದು ಇರುವುದಿಲ್ಲ . ನಾನು ಅರೊಪಿಯ ಹೇಳಿಕೆ ಪಡೆದುಕೊಂಡದ್ದೆ ಇಲ್ಲ ಅವರ ಸಹಿಗಳನ್ನು ಖಾಲಿ ಪೇಪರ ಮೇಲೆ ಪಡೆದುಕೊಂಡು ಉಳಿದ ವಿವರಣೆ ನಿವೆ ಬರೆದಿರುತ್ತಿರಿ ಎಂದರೆ ಸರಿಯಿಲ್ಲ . ನನ್ನ ಮುಂದೆ ಅರೋಪಿತರು ಯಾವುದೇ ಕಾಲಕ್ಕೂ ತನಿಖೆಗಾಗಿ ಹಾಜರಾಗಿದ್ದು ಇಲ್ಲ . ಮತ್ತು ಅವರ ಸ್ವಖುಷಿ ಹೇಳಿಕೆ ಯನ್ನು ಪಡೆದು ಕೊಂಡದ್ದು ಇಲ್ಲ ಎಂದರೆ ಸರಿಯಲ್ಲ . ನಾನು ಪ್ರಾಥಮಿಕ ತನಿಖೆಯನ್ನು ಸ್ವಖುಷಿ

ಹೇಳಿಕೆ ಪಡೆದುಕೊಂಡಿರುತ್ತೇನೆ ಮುಂದಿನ ತನಿಖೆಯನ್ನು ACF ಮಾಡಿರುತ್ತಾರೆ . 3 ಮತ್ತು 4 ನೆ ಅರೊಪಿತರು ನನ್ನ ಮುಂದೆ ಜಾಮಿನು ಪಡೆದು ಕೊಂಡ ನಂತರ ನನ್ನ ಮುಂದೆ ಹಾಜರಾಗಿದ್ದು ಇಲ್ಲ ಅವರು ಸ್ವಖುಷಿ ಹೇಳಿಕೆ ನಿಡಿದ್ದು ಇಲ್ಲ ಎಂದರೆ ಸರಿಯಲ್ಲ . ಮದ್ದನಮನೆ ನಾಲಾದಲ್ಲಿ ನೀರು ಹರಿಯವುದುಈ ಪೊಟೊ ಗಳಲ್ಲಿ ಕಂಡು ಬರುವುದಿಲ್ಲ ಎಂದರೆ ಜನವರಿಗೆ ತಿಂಗಳಿನಲ್ಲಿ ಸ್ವಲ್ಪ ಪ್ರಮಾಣದ ನೀರು ಹರಿಯವುದರಿಂದ ಆ ರೀತಿ ಕಾಣುತ್ತದೆ . ಸಾಕ್ಷಿಗೆ ನಿಪಿ–5 ರ 2 ಪೊಟೊ ತೋರಿಸಲಾಗಿದ್ದು ಸಾಕ್ಷಿ ಆ 2 ಪೊಟೊಗಳನ್ನು ನೋಡಿ ಆ ಪೊಟೊಗಳನ್ನು 2 angle ದಿಂದ ತೆಗೆಯಲಾಗಿರುತ್ತದೆ ಒಂದರಲ್ಲಿ ನೀರು ಕಾಣುವುದಿಲ್ಲ ಒಂದರಲ್ಲಿ ನೀರು ಕಾಣುತ್ತದೆ ನಿಪಿ–6 ರಲ್ಲಿ ಮದ್ದನಮನೆ ನಾಲಾದಲ್ಲಿ ನೀರು ಹರಿಯವುದು ಕಾಣುತದೆ . ನಿಪಿ–5 ರಲ್ಲಿ ಕಾಣುವಂತಹ ಹಂದಿಗೆ ಬಾಲ ಮತ್ತು ತಲೆ ಇಲ್ಲ ಎಂದರೆ ಅದನ್ನು ಒಂದು angle ತೆಗೆದಿರುವಾಗ ಬಾಲ ಸುಟ್ಟಿರುತ್ತದೆ ಆದರೆ ಕಾಣುತ್ತಿಲ್ಲ . ಇನ್ನೊಂದು angle ತಲೆ ಕಾಣುತಿರುತ್ತದೆ . ಯಾವುದೇ ಒಂದು ಪ್ರಾಣಿಯನ್ನು ಕಾಲಿನ ಗೊರಸು ಸುಡುತ್ತದೆ ಎಂದರೆ ಸರಿಯಲ್ಲ . ಸಾಕ್ಷಿ ಪುನಃ ಮುಂದುವರೆದು ಆರೋಪಿತರು ಆ ಹಂದಿಯ ಮಾಂಸವನ್ನು ತಿನ್ನುವ ಉದ್ದೇಶದಿಂದ ಸುಟ್ಟಿರುವುರಿಂದ ತಮಗೆ ಎಷ್ಟು ಬಾಗ ಬೇಕು ಅಷ್ಟು ಭಾಗ ಮಾತ್ರ ಸುಟ್ಟಿರುತ್ತಾರೆ ಗೊರಸನ್ನು ಸುಟ್ಟಿರುವುದಿಲ್ಲ . ಯಾವುದೇ ಪ್ರಾಣಿಯ ಮಾಂಸವನ್ನು ಸುಟ್ಟ ನಂತರ ಕೆಂಪು ಬಣ್ಣದಿಂದ ಕಂದುಬಣ್ಣಕ್ಕೆ ತಿರುಗುತ್ತದೆ ಎಂದರೆ ಅವರು ಮಾಂಸಕ್ಕಾಗಿ ಸುಟ್ಟಿರುವುರಿಂದ ಅವರು ಆ ಹಂದಿಯನ್ನು ಸುಟ್ಟು ತೊಳೆದು ಅದರ ಮೇಲ್ಭಾಗವನ್ನು ಕೆರೆಸಿರುವುದರಿಂದ ಅದರ ಕೊಬ್ಬಿನ ಬಿಳಿ ಬಾಗ ಮಾತ್ರ ಕಾಣುತ್ತದೆ . ವೈದ್ಯಕೀಯ ಪರಿಕ್ಷಗಾಗಿ ನಾನು ಹೋಗಿ ನೊಡಿದಾಗ ನನ್ನ ಪ್ರಕಾರ ಆ ಹಂದಿಯ ಚರ್ಮ ವನ್ನು ಅವರು ತೆಗೆದಿರುತ್ತಾರಾ ಎಂದರೆ ಅದು ಕೆರೆಸಿರುವುದರಿಂದ ಬಿಳಿ ಮತ್ತು ಕೆಲವು ಭಾಗ ಕಪ್ಪಗೆ ಕಾಣುತಿತ್ತು . ನಿಮ್ಮ ಪ್ರಕಾರ ಯಾವುದೆ ಒಬ್ಬ ಆರೊಪಿಯು ಗುನ್ಹೆಯಲ್ಲಿ ಭಾಗಿಯಾದಾಗ ಅವರು ತಪ್ಪಿಸಿಕೊಳ್ಳಬಾರದು ಎಂದು ನೀವಾಗಲಿ ಅಥವಾ ನಿಮ್ಮ ಸಿಬ್ಬಂದಿಯಾಗಲಿ ಹಿಡಿದು ಕೊಳ್ಳುತ್ತಿರೊ ಇಲ್ಲವೊ ಎಂದರೆ ಅವರು ಓಡಿ ಹೋಗುವ ಹಾಗೆ ಕಂಡು ಬಂದರೆ ಅವರನ್ನು ಹಿಡಿದಿಟ್ಟು ಕೊಳ್ಳುತ್ತೇವೆ ಅವರುಗಳು ವಯಸ್ಸಾಗಿ ಅಥವಾ ಅವರು ಅದೇ ಊರಿನವರಾಗಿದ್ದರಿಂದ ಅವರು ಓಡಿ ಹೋಗುವ ಪ್ರಯತ್ನ ಮಾಡುವ ಸಂಧರ್ಭ ಕಂಡು ಬಂದಿಲ್ಲ ಆ ಕಾರಣದಿಂದ ಅವರನ್ನು ಹಿಡಿದಿಟ್ಟು ಕೊಂಡಿಲ್ಲ .

12 ನಿಪಿ-6 ರ ಪೊಟೊದಲ್ಲಿ ಅರೋಪಿತರು ನಿರ್ಭೀತದಿಂದ ಸಾರ್ವಜನಿಕರೊಂದಿಗೆ ಪೊಟೊದಲ್ಲಿ ನಿಂತಿರುತ್ತಾರೆ ಎಂದು ಕಂಡುಬರುವುದಿಲ್ಲ ಪೊಟೊದಲ್ಲಿ ಅವರು ಹೆದರಿ ನಿಂತಿರುತ್ತಾರೊ ಅಥವಾ ನಿರ್ಭತಿದಿಂದ ನಿಂತಿರುತ್ತಾರೊ ಎಂದು ಕಾಣುವುದಿಲ್ಲ. 2 ನೆ ಅರೋಪಿಯು ನಿಪಿ-6 ರ ಪೊಟೊದಲ್ಲಿ ನಿಮ್ಮ ಸಿಬ್ಬಂದಿಯಿಂದ 25 ಅಡಿ ಅಂತರದಲ್ಲಿ ನಿಂತಿರಬಹುದು ಎಂದರೆ ಇರಬಹುದು. ಅದೇರೀತಿ 1 ನೆ ಅರೋಪಿಯು ನಿಮ್ಮಿಂದ 30 ಅಡಿ ಅಂತರದಲ್ಲಿ ನಿಂತಿರಬಹುದು ಎಂದರೆ ಆ ಪೊಟೊದಲ್ಲಿ ಕಾಣಿಸಲಾದ ಅರೋಪಿತರ ಹಿಂದೆ ನಮ್ಮ ಸಿಬ್ಬಂದಿಗಳು ಇರುವುದರಿಂದಲೇ ಹಿಂದಿನಿಂದ ಅವರ ಪೊಟೊ ಹೊಡೆದಿರುತ್ತಾರೆ . ಹಿಂದಿನಿಂದ ಪೊಟೊ ಹೊಡೆದಾಗ ಮುಖ ಕಾಣುವುದಿಲ್ಲ ಬೆನ್ನು ಕಾಣುತ್ತದೆ ಎಂದರೆ ಸರಿಯಲ್ಲ . ಸದ್ರಿ ನಿಪಿ-6 ರ ಪೊಟೊ ಹಿಂದಿನಿಂದ ನಿಂತು ಹೊಡೆದಂತಹ ಪೊಟೊ ಅಲ್ಲ ಎಂದರೆ ಸರಿಯಲ್ಲ . ದಿಃ5-1-2022 ರಂದು ನೀವು ಮದ್ದನ ಮನೆ ನಾಲಾಗೆ ಚಾಸಾ -2 ಮತ್ತು 3 ಹಾಗೂ ಪಶು ವೈದ್ಯಾದಿಕಾರಿ ಡಾಃ ಚಂದನ ರವನ್ನು ಕರೆದು ಕೊಂಡುಹೋದದ್ದು ಇಲ್ಲ ಎಂದರೆ ಸರಿಯಲ್ಲ . ಅದರಂತೆ ಪಶುವೈದ್ಯಾದಿಕಾರಿಯವರು ಮದ್ದನಮನೆನಾಲಾಗೆ ಬಂದದ್ದು ಇಲ್ಲ ಎಂದರೆ ಸರಿಯಲ್ಲ . ಎಲ್ಲೊ ಸತ್ತು ಬಿದ್ದಂತಹ ಹಂದಿಯನ್ನು 1 ಮತ್ತು 2 ಅರೊಪಿತರು ನೊಡಲು ಹೋದಾಗ ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಅದರಂತೆ 3 ಮತ್ತು 4 ನೇ ಅರೋಪಿತರ ಈ ಪ್ರಕರಣದಲ್ಲಿ ಭಾಗಿ ಯಾಗದೆ ಇದ್ದರೂ ಸಹ ಅವರು ಈ ಪ್ರಕರಣ ದಲ್ಲಿ ಭಾಗಿ ಯಾಗಿದಾದ್ದರೆ ಎಂದು ಸುಳ್ಳು ಪ್ರಕರಣ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ . ಆರೋಪಿತರು ಸಿದ್ದಿ ಸಮುದಾಯಕ್ಕೆ ಸೇರಿದವರಾಗಿದ್ದು ನಿಮ್ಮ ಇಲಾಖೆಯವರು ಸರಿಯಾಗಿ ಕೆಲಸ ಮಾಡುತಿಲ್ಲ ಎಂದು ಹಿಂದೆ ಯಾವಾಗಲೊ ದೂರನ್ನು ಕೊಟ್ಟಿದ್ದರು ಅದೆ ದ್ವೇಷ ಇಟ್ಟು ಕೊಂಡು ಸಿದ್ದಿ ಸಮುದಾಯ ಮೇಲೆ ಈ ಸುಳ್ಳು ಪ್ರಕರಣ ಸೃಷ್ಟಿ ಮಾಡಿ ಕೊಂಡಿರುತ್ತಿ ರಿ ಎಂದರೆ ಸರಿಯಲ್ಲ . 4 ನೆ ಅರೋಪಿತರು 1 ರಿಂದ 3 ಸಿದ್ದಿ ಜನಾಂಗದವರ ಸ್ನೇಹಿತರು ಅಗಿರುವುರಿಂದ ಅವರ ಮೇಲೂ ಸಹ ಸುಳ್ಳು ಪ್ರಕರಣ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ಅರೋಪಿ 1 ಮತ್ತು 2 ರವನ್ನು ಮನೆಯಿಂದ ಹಿಡಿದುಕೊಂಡು ಈ ಪ್ರಕರಣಕ್ಕೆ ಪೂರಕವಾಗಲಿ ಆ ರೀತಿಯಾಗಿ ಸೃಷ್ಟಿ ಮಾಡಿ ಸುಳ್ಳು ಪ್ರಕರಣ ವನ್ನು ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ. ನೀವು ಯಾವುದೇ

ಪ್ರಾಥಮಿಕ ತನಿಖೆ ಮಾಡದ್ದು ಇಲ್ಲ ಎಂದರೆ ಸರಿಯಲ್ಲ ಅಮಾಯಕರಾದ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ಸೃಷ್ಟಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.